# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ

## ಸಿ.ಸಿ. ನಂ. 292/2019

ಫಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ಮಾದನ ಹಿಪ್ಪರಗಾ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು

1. ಪರಮೇಶ್ವರ ತಂದೆ ಮಲ್ಲಪ್ಪ ಬಡಿಗೇರ,
ವಯಃ 45ವರ್ಷ, ಉಃ ಶಾಖಾಧಿಕಾರಿಗಳು ಮಾದನ ಹಿಪ್ಪರಗಾ,
ಸಾಃ ಕೊಂಡಗೂಳಿ ಗ್ರಾಮ ತಾಃ ಜೇವರ್ಗಿ,
ಹಾ.ವ. ಆಳಂದ, ಜಿಃ ಕಲಬುರಗಿ.
2. ನಾಗೇಶ ತಂದೆ ಮಲ್ಲಪ್ಪ ಗೊಗಾಯಿ,
ವಯಃ 29ವರ್ಷ, ಉಃ ಕಿರಿಯ ಮಾರ್ಗದಾಳು ಮಾದನ ಹಿಪ್ಪರಗ,
ಸಾಃ ದರ್ಗಾ ಶಿರೂರ ಗ್ರಾಮ, ತಾಃ ಆಳಂದ.

### ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಿಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ 1 ರಿಂದ 2ನೇ ಆರೋಪಿತರು **ಕೇಳಿದ್ದೇವೆ** .

ಪ್ರಶ್ನೆ 2. ಸಿ.ಡಬ್ಲೂ. 1. ಪಿ.ಡಬ್ಲೂ. 1 **ದಯಾನಂದ ತಂದೆ ಲಕ್ಷ್ಮಣ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುತ್ತದೆ. ಚಾಸಾ-2ರಿಂದ 3 ಮತ್ತು 7 ರಿಂದ 10, 12, 13 ರವರ ಪರಿಚಯ ಇರುತ್ತದೆ ಚಾಸಾ-4 ನನ್ನ ತಾಯಿ. ಚಾಸಾ-5 ನನ್ನ ಹೆಂಡತಿ. ಚಾಸಾ-6 ನನ್ನ ಅತ್ತಿಗೆ, ಚಾಸಾ-11 ಅಣ್ಣ ಇರುತಾತ್ತರೆ. 07.03.2019 ರಂದು ಮನುಕಿ ದ್ರಾಕ್ಷಿ ಶೆಡ್ ಇತ್ತು. ದ್ರಾಕ್ಷಿ ಹಾಕಲು ಶೆಡ್ ತಯಾರಿಸುತ್ತಿದ್ದೇವು. ಜಾಳಗಿ ಹೊಲೆಯುತ್ತಿರುವಾಗ ಕರೆಂಟ ವೈಯರ ಕೆಳಗೆ ಬಿದ್ದು ನನ್ನ ಕುತ್ತಿಗೆಗೆ ಹತ್ತಿರುತ್ತದೆ. ಆಗ ನಾನು ಶೆಡ್ಡಿನ ಎಂಗಲ್ ಪಟ್ಟಿಯ ಮೇಲೆ ನಿಂತಿದ್ದಾಗ ಕರೆಂಟ ಕಾಲಿನಿಂದ ಪಾಸಾಗಿ ಬ್ಲಾಸ್ಟ ಆಗಿರುತ್ತದೆ. ನಂತರ ನಾನು ಆಯ ತಪ್ಪಿ ಬಿದ್ದಿರುತ್ತೇನೆ. ನನ್ನನ್ನು ಸೋಲಾಪೂರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ 2 ಗಂಟೆಗಳ ನಂತರ ಪ್ರಜ್ಞೆ ಬಂದಿರುತ್ತದೆ. ನಾನು ದೂರನ್ನು ದಾಖಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ?

ಉತ್ತರಃ 1 ರಿಂದ 2ನೇ ಆರೋಪಿತರು. **ಸುಳ್ಳು**

ಪ್ರಶ್ನೇ 3- ಸಿ.ಡಬ್ಲ್ಯೂ.2. ಪಿ. ಡಬ್ಲ್ಯೂ. 2, **ಶ್ರೀ ಶೈಲ ತಂದೆ ಸುಭಾಷ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುತ್ತದೆ, ಚಾಸ-1,3 ರಿಂದ 13 ಪರಿಚಯ ಇರುತ್ತಾರೆ. 2019ರಲ್ಲಿ ನಾನು ಚಾಸಾ-1ರವರ ಹೊಲಕ್ಕೆ ಹೋದಾಗ ಅವರು ಕರೆಂಟ ಹೊಡೆದು ಬಿದ್ದಿದ್ದರು. ನಾನು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಅದನ್ನು ನಿಪಿ-1 ತೋರಿಸಿ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು.

ಪ್ರಶ್ನೆ 4- ಸಿ.ಡಬ್ಲ್ಯೂ.3, ಪಿ. ಡಬ್ಲ್ಯೂ. 3 **ಪ್ರಕಾಶ ತಂದೆ ಓಂ ಪ್ರಕಾಶ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-1,2,4 ರಿಂದ 13 ರವರ ಪರಿಚಯ ಇರುತ್ತದೆ. ನಾನು ಕೆಲಸಕ್ಕೆ ಹೋದಾಗ ಕೆಲಸ ಮಾಡುವಾಗ ಕರೆಂಟ ಹತ್ತಿರುತ್ತದೆ. ಪೋಲಿತರು ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಮತ್ತೆನಾಗಿರುತ್ತದೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಈಗ ನಿಪಿ-1 ತೋರಿಸಿ ಸಹಿ ತೋರಿಸಿ ಅದನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು. **ಸುಳ್ಳು**

ಪ್ರಶ್ನೆ 5- ಸಿ.ಡಬ್ಲ್ಯೂ.04, ಪಿ. ಡಬ್ಲ್ಯೂ. 04 ರವರು ಆದ **ಲಕ್ಷ್ಮಿಬಾಯಿ ತಂದೆ/ಗಂಡ ಲಕ್ಷ್ಮಣ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ನನ್ನ ಮಗ, ಚಾಸಾ-2, 3 ರವರ ಪರಿಚಯ ಇರುತ್ತದೆ, ಚಾಸಾ-5,6 ನನ್ನ ಸೊಸೆಯಂದಿರು, ಚಾಸಾ-7 ರಿಂದ 10 ರವರ ಪರಿಚಯ ಇರುತ್ತದೆ. ಚಾಸಾ-11 ನನ್ನ ಮಗ. ಚಾಸಾ-12, 13 ರವರ ಪರಿಚಯ ಇರುತ್ತದೆ. 4-5 ವರ್ಷಗಳ ಹಿಂದೆ ದ್ರಾಕ್ಷಿ ಶೆಡ್ ಹೊಲೆಯಲು ಚಾಸಾ-1 ರವರು ಹೋದಾಗ ಗಾಳಿಯ ರಭಸಕ್ಕೆ ವಿದ್ಯುತ್ ತಂತಿಯು ಅವರ ಭುಜದ ಮೇಲೆ ಬಿದ್ದಿರುತ್ತದೆ ಆಗ ಪ್ರಜ್ಞೆ ತಪ್ಪಿ ಬಿದ್ದಿರುತ್ತಾರೆ. ನಂತರ ನಾವು ಪ್ರಥಮ ಉಪಚಾರ ಮಾಡಿ ಅಕ್ಕಪಕ್ಕದವರನ್ನು ಕರೆದುಕೊಂಡು ಅವರನ್ನು ಸೋಲಾಪೂರ ಅಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ 3-4 ತಿಂಗಳು ಚಿಕಿತ್ಸೆ ಪಡೆದಿರುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು. **ಸುಳ್ಳು**

ಪ್ರಶ್ನೆ 6- ಸಿ.ಡಬ್ಲ್ಯೂ.05, ಪಿ. ಡಬ್ಲ್ಯೂ. 05 ರವರು ಆದ **ಅಂಜಲಿ ತಂದೆ/ಗಂಡ ದಯಾನಂದ ಮುಲಗೆ** ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ನನ್ನ ಗಂಡ, ಚಾಸಾ-2, 3,

7 ರಿಂದ 10, 12, 13 ಪರಿಚಯ ಇರುತ್ತಾರೆ. ಚಾಸಾ-4 ನನ್ನ ಅತ್ತೆ, ಚಾಸಾ-6 ನೆಗೆಣ್ಣಿ, ಚಾಸಾ-11 ನನ್ನ ಭಾವ ಇರುತ್ತಾರೆ. ನಾವು ಆವತ್ತು ನಮ್ಮ ಶೆಡ್ಡಿನಲ್ಲಿ 5-6 ಜನ ಕೆಲಸಗಾರರೊಂದಿಗೆ ಕೆಲಸ ಮಾಡುತ್ತಿದ್ದೇವು. ಚಾಸಾ-1 ರವರು ಶೆಡ್ಡಿನ ಮೇಲೆ ಜಾಳಿಗೆ ಹಾಕಲು ಹೋದಾಗ ಕರೆಂಟ ತಂತಿ ನನ್ನ ಗಂಡನ ಕುತ್ತಿಗೆ ಮೇಲೆ ಬಿದ್ದು ವಿದ್ಯುತ್ ಸಂಚಾರವಾಗಿ ಕೆಳಗೆ ಬಿದ್ದಿರುತ್ತಾರೆ. ನಂತರ ಚಾಸಾ-10, 12, 13 ರವರು ಸೇರಿ ವಾಹನದಲ್ಲಿ ಚಾಸಾ-1 ರವರನ್ನು ಸೋಲಾಪೂರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾವು 4-5 ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ. ಸಾಕ್ಷಿ ಮುಂದುವರೆದು ನಾವು ಕೆಇಬಿಯವರಿಗೆ ಸದರಿ ವಿದ್ಯುತ ತಂತಿ ತೆಗೆಯಬೇಕು ಎಂದು ಅರ್ಜಿ ನೀಡಿದ್ದರೂ ಸಹಿತ ಅವರು ತೆಗೆದಿರಲಿಲ್ಲ ಎಂದು ಹೇಳುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು.**ಸುಳ್ಳು**

ಪ್ರಶ್ನೆ 7- ಸಿ.ಡಬ್ಲೂ.06, ಪಿ. ಡಬ್ಲೂ. 06 ರವರು ಆದ **ಸವಿತಾ ತಂದೆ/ಗಂಡ ಸಿದ್ದರಾಮ** ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ನನ್ನ ಮೈದುನ, ಚಾಸಾ-2, 3, 7 ರಿಂದ 10, 12, 13 ಪರಿಚಯ ಇರುತ್ತಾರೆ. ಚಾಸಾ-4 ನನ್ನ ಅತ್ತೆ, ಚಾಸಾ-5 ನೆಗೆಣ್ಣಿ, ಚಾಸಾ-11 ನನ್ನ ಗಂಡ ಇರುತ್ತಾರೆ. ನಾವು ಆವತ್ತು ನಮ್ಮ ಶೆಡ್ಡಿನಲ್ಲಿ ಕೆಲಸ ಮಾಡುತ್ತಿದ್ದೇವು. ಚಾಸಾ-1 ರವರು ಶೆಡ್ಡಿನ ಮೇಲೆ ಜಾಳಿಗೆ ಹಾಕಲು ಹೋದಾಗ ಕರೆಂಟ ತಂತಿ ನನ್ನ ಮೈದುನನ ಕುತ್ತಿಗೆ ಮೇಲೆ ಬಿದ್ದು ವಿದ್ಯುತ್ ಸಂಚಾರವಾಗಿ ಕೆಳಗೆ ಬಿದ್ದಿರುತ್ತಾರೆ. ಅವರನ್ನು ಹೋಗಿ ನೋಡಿದಾಗ ಅವರ ಬಾಯಿಯಲ್ಲಿ ಬುರುಗು ಬಂದಿತ್ತು ಮತ್ತು ಅವರ ಬೆನ್ನಿನ ಮೇಲೆ ತಂತಿ ಬಿದ್ದ ಕಾರಣ ವಿದ್ಯುತ ಸಂಚಾರ ಆಗಿ ಗಾಯ ಅಗಿತ್ತು. ನಂತರ ಚಾಸಾ-10, 12 ರವರು ಸೇರಿ ವಾಹನದಲ್ಲಿ ಚಾಸಾ-1 ರವರನ್ನು ಸೋಲಾಪೂರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾವು 4-5 ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು.**ಸುಳ್ಳು**

ಪ್ರಶ್ನೆ 8- ಸಿ.ಡಬ್ಲೂ.08, ಪಿ. ಡಬ್ಲೂ. 07 ರವರು ಆದ **ಗುಂಡಪ್ಪ ತಂದೆ ಮಲಕಪ್ಪ** ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುತ್ತದೆ, ಚಾಸ-1 ರಿಂದ 7, 9 ರಿಂದ 13 ರವರ ಪರಿಚಯ ಇರುತ್ತಾರೆ. ನಾವು ಕೆಳಗೆ ಇದ್ದಾಗ ಗಾಳಿ ಬೀಸಿದ್ದರಿಂದ ಚಾಸಾ-1ರವರ ಮೇಲೆ ಲೈಟ್ ಕಂಬದಿಂದ ಪಟ್ಟಿ ಬಿದ್ದಿದ್ದು ಅವರಿಗೆ ತಗುಲಿದ್ದು ನಂತರ ಅವರನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು.**ಸುಳ್ಳು**

ಪ್ರಶ್ನೆ 9- ಸಿ.ಡಬ್ಲ್ಯೂ.10, ಪಿ. ಡಬ್ಲ್ಯೂ. 08 ರವರು ಆದ **ಮಲ್ಲಿನಾಥ ತಂದೆ ಭೀಮಶಾ ಉದ್ದನಶೆಟ್ಟಿ** ತಮ್ಮ ನುಡಿ ಸಾಕ್ಷಿಯಲ್ಲಿ 1 ಮತ್ತು 2ನೇ ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರಿಂದ 9, 11 ರಿಂದ 13 ರವರ ಪರಿಚಯ ಇರುತ್ತದೆ. ನಾನು ಚಾಸಾ-1 ರವರ ಪಕ್ಕದ ಜಮೀನಿನಲ್ಲಿ ನೀರು ಹಾಯಿಸುತ್ತಿದ್ದೇನು ಶಬ್ದ ಕೇಳಿ ಚಾಸಾ-1 ರವರ ಜಮೀನಿಗೆ ಹೋಗಿರುತ್ತೇನೆ. ನಾನು ಹೋದಾಗ ಚಾಸಾ-1 ರವರಿಗೆ ಕರೆಂಟ ತಗಲಿತ್ತು ಎಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ಮರಳಿ ಬಂದಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು. **ಸುಳ್ಳು**

ಪ್ರಶ್ನೆ 10- ಸಿ.ಡಬ್ಲ್ಯೂ.11, ಪಿ. ಡಬ್ಲ್ಯೂ. 09 ರವರು ಆದ **ಸಿದ್ದರಾಮ ತಂದೆ ಲಕ್ಷ್ಮಣ** ತಮ್ಮ ನುಡಿ ಸಾಕ್ಷಿಯಲ್ಲಿ ಚಾಸಾ-1 ನನ್ನ ತಮ್ಮ, ಚಾಸಾ-4 ನನ್ನ ತಾಯಿ, ಚಾಸಾ-5 ಚಾಸಾ-1 ರವರ ಹೆಂಡತಿ, ಚಾಸಾ-6 ನನ್ನ ಹೆಂಡತಿ, ಚಾಸಾ-7 ರಿಂದ 9 ರವರ ಪರಿಚಯ ಇರುತ್ತದೆ. ದಿ.07.03.2019 ರಂದು ಚಾಸಾ-1 ರವರು ಸರ್ವೆ ನಂ.3/1 ರಲ್ಲಿ ಇರುವ ಶೆಡ್ಡಿನ ಮೇಲೆ ರೇಷ್ಮೇ ನೇಯುವಾಗ ಚಾಸಾ-4 ರಿಂದ 7, 9, 10 ರವರು ಕೆಳಗೆ ಕೆಲಸ ಮಾಡುತ್ತಾ ಕುಳಿತಿದ್ದು, 11.00 ಗಂಟೆ ಸುಮಾರಿಗೆ ಶೆಡ್ಡಿನ ಮೇಲೆ ಮೇನ ಲೈನ ಹಾದು ಹೋಗಿದ್ದು ವಿದ್ಯುತ ಎಂಗಲ್ ನ ವಿದ್ಯುತ ತಂತಿ ಬಂದು ಚಾಸಾ-1 ರವರ ಕುತ್ತಿಗೆಯ ಮೇಲೆ ಬಿದ್ದಾಗ ಚಾಸಾ-1 ರವರು ನಾನು ಸತ್ತೇ ಎಂದು ಚೀರಿ ಶೆಡ್ಡಿನ ಮೇಲಿಂದ ಕೆಳಗೆ ಬಿದ್ದಿರುತ್ತಾರೆ. ನಂತರ ಚಾಸಾ-10 ರವರು ಸದರಿ ವಿಷಯ ತಿಳಿಸಿದಾಗ ನಾನು, ಚಾಸಾ-12 ರವರು ಬಂದು ಚಾಸಾ-1 ರವರನ್ನು ಸೋಲಾಪೂರದ ಆಸ್ಪತ್ರೆಗೆ ಕೆರೆದುಕೊಂಡು ಹೋಗಿರುತ್ತೇವೆ. ವಿದ್ಯುತ ತಂತಿ ತಗುಲಿದ ಕಾರಣ ಚಾಸಾ-1 ರವರ ದೇಹದಲ್ಲಿ ವಿದ್ಯುತ ಹರಿದು ಅವರ ಕುತ್ತಿಗೆಗೆ ಗಾಯ, ಕಿವಿಯ ಹತ್ತಿರ ಮತ್ತು ಮೂಗಿನ ಹತ್ತಿರ ಗಾಯ ಆಗಿ ಕಾಲಿಗೆ ರಕ್ತ ಬಂದಿತ್ತು. ಅಲ್ಲಿ ಒಂದು ತಿಂಗಳ ಕಾಲ ಚಿಕಿತ್ಸೆ ಪಡೆದು, ನಂತರ ಪೋಲಿಸರು ದಿ.20.03.2019 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆ ಮಾಡಿ ಫೋಟೊ ತೆಗೆದುಕೊಂಡಿರುತ್ತಾರೆ. ನಾವು ಕೆಇಬಿ ಅಧಿಕಾರಿಗಳಿಗೆ ವಿದ್ಯುತ ತಂತಿಯ ಬಗ್ಗೆ ಹಲವಾರು ಬಾರಿ ವಿಷಯ ತಿಳಿಸಿದ್ದರೂ ಅವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆರೋಪಿತರೂ ಸಹ ಹಲವಾರು ಬಾರಿ ನಮ್ಮ ಜಮೀನಿಗೆ ಭೇಟಿ ಕೊಟ್ಟಾಗ ವಿಷಯ ತಿಳಿಸಿದ್ದು ಆಗ ಅವರು ಮಾಡಿಕೊಡುತ್ತೇವೆ ಎಂದು ತಿಳಿಸಿ ಫೋಟೊ ತೆಗೆದುಕೊಂಡು ಹೋದರೂ ಸಹ ದುರಸ್ತಿ ಮಾಡದ ಕಾರಣ ಆರೋಪಿತರ ತಪ್ಪಿ ನಿಂದ ಚಾಸಾ-1 ರವರಿಗೆ ಗಾಯ ಆಗಿರುತ್ತದೆ. ನಾನು ಮೇಲೆ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು. **ಸುಳ್ಳು**

ಪ್ರಶ್ನೆ 11- ಸಿ.ಡಬ್ಲ್ಯೂ.15, ಪಿ. ಡಬ್ಲ್ಯೂ. 10 ರವರು ಆದ **ಲಕ್ಷ್ಮಣ ತಂದೆ ವಿಠೋಬಾ** ತಮ್ಮ ನುಡಿ ಸಾಕ್ಷಿಯಲ್ಲಿ ನಾನು 2015 ರಿಂದ 2023 ರ ವರೆಗೆ ನಾನು ಮಾದನ ಹಿಪ್ಪರಗಾ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆ ಎಂದು  ಕಾರ್ಯ ನಿರ್ವಹಿಸಿದ್ದೇನೆ. ದಿ.20.03.2019 ರಂದು ನಾನು ಠಾಣಾಧಿಕಾರಿ ಕರ್ತವ್ಯದಲ್ಲಿದ್ದಾಗ 10.00 ಗಂಟೆಗೆ ಮಲ್ಲಿಕಾರ್ಜುನ ಎಎಸಐ ರವರು ಎಂಎಲಸಿ ದೂರು ನೀಡಿದ್ದು ಅದರ ಸಾರಾಂಶದ ಮೇರೆಗ ಠಾಣಾ ಗುನ್ನೆ ಸಂಖ್ಯೆ 23/2019 ದಾಖಲಿಸಿಕೊಂಡು ಪ್ರ.ವ.ವ.ವನ್ನು ನ್ಯಾಯಾಲಯಕ್ಕೆ 11.00 ಗಂಟೆಗೆ ಪಿಸಿ-ಶಿವರಾಜರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು, ಚಾಸಾ-11 ರವರು ತೋರಿಸಿದ ಗುನ್ನೆ ಜಾಗೆಯನ್ನು 11.30 ರಿಂದ 12.30 ರ ವರೆಗೆ ಗುನ್ನಾ ಸ್ಥಳ ಪಂಚನಾಮೆ ಚಾಸಾ-2, 3 ರವರ ಸಮಕ್ಷಮ ಮಾಡಿ, ಚಾಸಾ- 4 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡು,ದಿ.06.05.2019 ರಂದು ಕೇಂಬಿಯವರಿಗೆ ಪತ್ರ ಬರೆದು ಸ್ವಿಕೃತಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.06.05.2019 ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-16 ರವರಿಗೆ ನೀಡಿರುತ್ತೇನೆ.  ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು.  **ಸುಳ್ಳು**

ಪ್ರಶ್ನೆ 12- ಸಿ.ಡಬ್ಲ್ಯೂ.16, ಪಿ. ಡಬ್ಲ್ಯೂ. 11 ರವರು ಆದ **ವೆಂಕಪ್ಪಾ ತಂದೆ ಭೀಮಪ್ಪಾ ಯಾದವಾಡ** ತಮ್ಮ ನುಡಿ ಸಾಕ್ಷಿಯಲ್ಲಿ ಫೇಬ್ರವರಿ 2019 ರಿಂದ ಜೂನ್ 2019 ರ ವರೆಗೆ ನಾನು ಮಾದನ ಹಿಪ್ಪರಗಾ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಅಂತಾ  ಕಾರ್ಯ ನಿರ್ವಹಿಸಿದ್ದೇನೆ. ದಿ.25.05.2019 ರಂದು  ಚಾಸಾ-15 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ಪಪರಿಶೀಲನೆ ಮಾಡಿ ದಿಃ 30.05.2019 ರಂದು ಯಶೋದರಾ ಆಸ್ಪತ್ರೆ ಸೋಲ್ಲಾಪೂರದಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 31.05.2019 ರಂದು ಆರೋಪಿತರನ್ನು ದಸ್ತಗೀರಿ ಮಾಡಿ ದಸ್ತಗೀರ ನಿಯಮ ಪಾಲಿಸಿ ಯೊಗ್ಯ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಇದ್ದ ಕಾರಣ ದಿಃ 02.06.2019 ರಂದು ತನಿಖೆ ಪೂರ್ಣಗೊಂಡ ಕಾರಣ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದ ಕಾರಣ ಅದನ್ನು ನಿಪಿ-5 ಅಂತಾ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.  ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು  ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು.  **ಸುಳ್ಳು**

ಪ್ರಶ್ನೆ 13- ಸಿ.ಡಬ್ಲೂ.14, ಪಿ. ಡಬ್ಲೂ. 12 ರವರು ಆದ **ಡಾ. ವಿಜಯ ತಂದೆ ಶಿವಲಿಂಗ ಶಿವಪೂಜೆ** ತಮ್ಮ ನುಡಿ ಸಾಕ್ಷಿಯಲ್ಲಿ (ಸಾಕ್ಷಿಯೂ ವಿಡಿಯೋ ಕಾನ್ಫರೇನ್ಸ ಮುಖಾಂತರ ಹಾಜರಾಗಿದ್ದು ಮತ್ತು ಅವರಿಗೆ ಇಂಗ್ಲೀಷ ಮತ್ತು ಮರಾಠಿ ಭಾಷೆ ಬರುತ್ತಿದ್ದ ಕಾರಣ ನ್ಯಾಯಾಲಯವು ಸ್ವತಃ ಕನ್ನಡಕ್ಕೆ ಅನುವಾದಿಸಿಕೊಂಡಿರುತ್ತದೆ.) ನಾನು 2008 ರಿಂದ ಇಲ್ಲಿವರೆಗೆ ಯಶೋಧಾರ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನೆ ದಿಃ 07.03.2019 ರಂದು ಚಾಸಾ-1ರವರು ಮ.1.13 ಗಂಟೆಗೆ ಆಸ್ಪತ್ರೆಗೆ Electric Burn(ಸುಟ್ಟ ಗಾಯ) ಮತ್ತು ಮೇಲಿನಿಂದ ಬಿದ್ದ ಹಿನ್ನಲೆ ಮೇಲೆ ಬಂದಿದ್ದರು. ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಈ ಕೆಳಕಂಡಂತೆ ಗಾಯಗಳು ಆಗಿದ್ದವು.

1. Deep burn over nape of the neck about 12 c.m width, 0.8 c.m depth,
2. Deep burn over right neck and shoulder about 13 c.m (length) 3 c.m width, 0.7 c.m depth.
3. Deep burn over the right sole about 20c.m (length) 5 c.m width, 0.5 c.m depth.
4. Deep burn over the left sole about 20c.m (Length) 10 c.m width, 0.5 c.m depth. ದಿಃ 09.03.2019 ರಂದು ಅವರಿಗೆ ಶಸ್ತ್ರಚಿಕಿತ್ಸೆ ಮಾಡಿದ್ದು ದಿಃ 15.03.2019 ರಂದು ಬಿಡುಗಡೆ ಮಾಡಿರುತ್ತೇನೆ. ನನ್ನ ಪ್ರಕಾರ ಸದರಿ ಗಾಯಗಳು ಸಾದ ಗಾಯ ಇರುತ್ತವೆ. ಸಾಕ್ಷಿ ನಿಪಿ-5 ರಲ್ಲಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-(ಎ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 2ನೇ ಆರೋಪಿತರು. **ಸುಳ್ಳು**

ಪ್ರಶ್ನೆ 14- ನೀವು ಏನನ್ನಾದರೂ ಹೇಳ ಬಯಸುವೀರಾ?

ಉತ್ತರಃ 1 ರಿಂದ 2ನೇ ಆರೋಪಿತರು. **ಏನು ಇಲ್ಲಾ**

ಪ್ರಶ್ನೆ 15- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ 1 ರಿಂದ 2ನೇ ಆರೋಪಿತರು. **ಏನು ಇಲ್ಲಾ**

(ಮೇಲೆ ಹೇಳಲಾದ ಪ್ರಶ್ನೆಗಳನ್ನು 1 ರಿಂದ 3ನೇ ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ನ್ಯಾಯಾಲಯ.